VIJAYAKUMAR KANNUR
Digitally signed by VIJAYAKUMAR KANNUR
Date: 2026.01.30 17:10:58 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 30.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಕೆ ಕೆ ಜಿ ವಕೀಲರಿಂದ**

ನಾನು ಆರೋಪಿ ಇದ್ದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅದರಲ್ಲಿ ಬರೆದ ವಿಚಾರಗಳು ಸತ್ಯವಾಗಿರುತ್ತದೆ.

**ಪಾಟೀ ಸವಾಲುಃ ದೂರುದಾರ ಪರ ಶ್ರೀ ಎಸ್ ಎನ್ ಪಿ ವಕೀಲರಿಂದ :**

ನನಗೆ ದೂರುದಾರನ ಪರಿಚಯ ಇರುವುದು. ದೂರುದಾರ ಮುಧೋಳ ಪಟ್ಟಣದ ಜಯನಗರದಲ್ಲಿ ವಾಸವಾಗಿರುವನು ಎಂದರೆ ಸರಿ. ನಾನು ಸಹ ಮುಧೋಳ ಪಟ್ಟಣದ ಜಯನಗರದಲ್ಲಿ ವಾಸವಾಗಿರುತ್ತೇನೆ ಅಂತ ಸೂಚಿಸುದು ಸರಿಯಲ್ಲ, ಸೈದಾಪೂರದಲ್ಲಿ ವಾಸವಾಗಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಈ ದೂರು ದಾಖಲು ಮಾಡುವ ಪೂರ್ವದಲ್ಲಿ ದೂರುದಾರ ನಿಪಿ 3 ರಂತೆ ನನಗೆ ನೊಂದಾಯಿತ ಅಂಚೆಯ ಮೂಲಕ ನೋಟಿಸು ನೀಡಿದ್ದನು ಎಂದರೆ ಸರಿ. ನಿಪಿ 4 ರಂತೆ ನಾನು ಸಹಿ ಮಾಡಿ ಪಡೆದುಕೊಂಡಿದ್ದೇನೆ ಎಂದರೆ ಸರಿ. ನಿಪಿ 4 ರ ಮೇಲಿನ ಸಾಕ್ಷಿಯ ಸಹಿಯನ್ನು ತೋರಿಸಲಾಗಿ ಅದು ತನ್ನದೇ ಇರುವುದಾಗಿ ಎಂದು ಸಾಕ್ಷಿ ಒಪ್ಪಿಕೊಂಡಿರುವರು. ನಿಪಿ 4 ರ ಪ್ರಕಾರ ನಾನು ಜಯನಗರದಲ್ಲೇ ವಾಸವಾಗಿರುವೆನು ಅಂತ ಸೂಚಿಸುವುದು ಸರಿಯಲ್ಲ.

2. ನಾನು ಮೊದಲಿನಿಂದಲೂ ಸಣ್ಣ ಸಣ್ಣ ನಗರಗಳಲ್ಲಿ ಬಾಂಡೆ ಸಾಮಾನುಗಳನ್ನು ಮಾರಾಟ ಮಾಡುವ ವ್ಯಾಪಾರ ಮಾಡುತ್ತಿರುವೆನು ಎಂದರೆ ಸರಿ. ನನ್ನ ಬಾಂಡೆ ವ್ಯಾಪಾರದ ಸಲುವಾಗಿ ನಾನು ದೂರುದಾರನ ಕಡೆಯಿಂದ ಹಣ ತೆಗೆದುಕೊಂಡಿದ್ದೇನೆ ಎಂದರೆ ಸರಿ. ನಾನು

ದೂರುದಾರನ ಕಡೆಯಿಂದ ಪಡೆದುಕೊಂಡಿರುವ ಹಣವನ್ನು ನಾನು ವ್ಯಾಪಾರದಿಂದ ಬಂದ ನಂತರ 5-6 ತಿಂಗಳಲ್ಲಿ ಮರಳಿ ನೀಡುವುದಾಗಿ ಎಂದು ಹೇಳಿದ್ದೇನು ಎಂದರೆ ಸರಿ. ದೂರುದಾರ ಹಣ ನೀಡುವಂತೆ ಕೇಳಲು ಬಂದಾಗ ನಾನು ನಿಪಿ 1 ರ ಚೆಕ್ ನ್ನು ದೂರುದಾರನಿಗೆ ನೀಡಿದ್ದೇನೆ ಎಂದರೆ ಸರಿ. ನಿಪಿ 1 ಎ ಸಹಿ ನನ್ನದೇ ಆಗಿರುವುದು. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದೇ ಇದ್ದರೂ ಸಹಿತ ನಿಪಿ 1 ರ ಚೆಕ್ ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ದೂರುದಾರನ ಕಡೆಯಿಂದ ರೂ. 90 ಸಾವಿರ ಹಣ ಪಡೆದುಕೊಳ್ಳುವ ಸಮಯದಲ್ಲಿ ನಿಪಿ 1 ರ ಖುಲ್ಲಾ ಚೆಕ್ ನ್ನು ದೂರುದಾರನಿಗೆ ನೀಡಿರುವೆನು. ನಿಪಿ 1 ರ ಚೆಕ್ ಅಮಾನ್ಯಗೊಂಡ ನಂತರ ದೂರುದಾರ ನನಗೆ ನಿಪಿ 3 ರಂತೆ ನೋಟಿಸು ನೀಡಿರುವನು ಎಂದರೆ ಸರಿ. ನಿಪಿ 3 ರ ನೋಟಿಸಿಗೆ ನಾನು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ನಿಪಿ 3 ರಲ್ಲಿ ಬರೆದಿರುವ ಸಂಗತಿಗಳು ನಿಜವಿರುವುದರಿಂದ ಆ ಕಾರಣಕ್ಕಾಗಿ ನಾನು ಉತ್ತರ ನೀಡಿರುವುದಿಲ್ಲ ಎಂದರೆ ಸರಿ.

3. ನಾನು ಸೈದಾಪೂರ ಓಣಿಯಲ್ಲಿ ವಾಸವಾಗಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಾನು ದೂರುದಾರನ ಕಡೆಯಿಂದ ರೂ. 2 ಲಕ್ಷ 50 ಸಾವಿರ ಹಣವನ್ನು ತೆಗೆದುಕೊಂಡು ಅದರಲ್ಲಿ ಯಾವುದೇ ಹಣವನ್ನು ಮರು ಸಂದಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದೂರುದಾರನ ಕಡೆಯಿಂದ ಕೇವಲ ರೂ. 90 ಸಾವಿರ ಹಣ ಪಡೆದುಕೊಂಡಿದ್ದು, ಅದರಲ್ಲಿ ರೂ. 1 ಲಕ್ಷ ಹಣ ಮರು ಸಂದಾಯ ಮಾಡಿರುವೆನು. ಈ ಸಂಗತಿ ನಾನು ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ. ನಾನು ದೂರುದಾರನ ಕಡೆಯಿಂದ ರೂ. 2 ಲಕ್ಷ 50 ಸಾವಿರ ಹಣ ಪಡೆದುಕೊಂಡಿದ್ದರೂ ಸಹಿತ ಆತನಿಗೆ ಈ ಹಣ ಮರಳಿ ನೀಡಬಾರದು ಎಂಬ ಕಾರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರನಿಗೆ ಹಣ ನೀಡಬಾರದು ಎಂಬ ಕಾರಣಕ್ಕಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ